

# ಭಲೇ ಭಲೇ ಬಲೇಯಾಜ್

70ರ ದಶಕದಲ್ಲಿ 'ಬಿ ಟೌನ್' ಲಲನಾಮಣಿಯರ ನೆಚ್ಚಿನ ಆಯ್ಕೆಯಾಗಿದ್ದ 'ಬಲೇಯಾಜ್' ಸ್ಟೈಲ್ ಇದೀಗ ಮತ್ತೆ ಸದ್ದು ಮಾಡುತ್ತಿದೆ. ಇತ್ತೀಚೆಗೆ ಗೋದ್ರೆಜ್ ಆಯೋಜಿಸಿದ್ದ ಒಂದು ದಿನದ ಕೇಶವಿನ್ಯಾಸದ ಕಾರ್ಯಾಗಾರದಲ್ಲಿ ಗೋದ್ರೆಜ್ ವೃತ್ತಿಪರರ ತಂಡ 'ಬಲೇಯಾಜ್' ಕುರಿತು ಮಾಹಿತಿ ಹಂಚಿಕೊಂಡಿತು.

■ ಸುಶೀಲಾ ಡೋಣೂರ

70ರ ದಶಕವನ್ನು ಫ್ಯಾಷನ್ ಲೋಕ ಸಂಭ್ರಮಿಸುವ ರೀತಿಯೇ ಬೇರೆ. ಅನೇಕ ಹೊಸ ಟ್ರೆಂಡ್‌ಗಳಿಗೆ, ಫ್ಯಾಷನ್ ತಂತ್ರಗಳಿಗೆ ಸಾಕ್ಷಿಯಾದ ಕಾಲಘಟ್ಟವದು. 70ರ ಆ ಫ್ಯಾಷನ್, ಬಾಲಿವುಡ್‌ನಲ್ಲಿ ಇಂದಿಗೂ ಆಗಾಗ ಮರುಕಳಿಸುತ್ತಲೇ ಇರುತ್ತದೆ. ಒಂದಷ್ಟು ನಾವೀನ್ಯತೆ, ಮತ್ತಷ್ಟು ಬದಲಾವಣೆ, ಜೊತೆಗಿಷ್ಟು ಹೊಸತನದೊಂದಿಗೆ ಮತ್ತೆಮತ್ತೆ ಎದುರಾಗುವ ಅಂತಹ 70ರ ಫ್ಯಾಷನ್‌ಗಳಲ್ಲಿ 'ಬಲೇಯಾಜ್' ನೋಟವೂ ಒಂದು.

## ಏನಿದು ಬಲೆಯಾಜ್?

ಇದು ಬರೀ ಕೇಶವಿನ್ಯಾಸವಲ್ಲ ಅಥವಾ ಕೇವಲ ಕಲರಿಂಗ್ ಕೌಶಲವೂ ಅಲ್ಲ. ಬಣ್ಣಗಳ ಸರಿಯಾದ ಸಂಯೋಜನೆ, ಬ್ರಶ್‌ನ ಕಲಾತ್ಮಕ ಪ್ರಯೋಗ, ಕತ್ತರಿಯ ವಿಶಿಷ್ಟ ಚಲನೆ... ಇಂತಹ ಹಲವು ಅಂಶಗಳನ್ನು ಒಳಗೊಂಡ ಫ್ರೀಹ್ಯಾಂಡ್ ಹೇರ್ ಹೈಲೈಟ್ ಮಾಡುವ ತಂತ್ರವಿದು. ಕೇಶವಿನ್ಯಾಸ ಮತ್ತು ಕಲರಿಂಗ್ ಎರಡರ ನಡುವೆಯೂ ಒಂದು ಸಂಯೋಜನೆ ಇರಬೇಕು. ಆಗಲೇ 'ಬಲೇಯಾಜ್' ಪರಿಪೂರ್ಣ ಲುಕ್ ಸಿಗಲು ಸಾಧ್ಯ.

1970ರಲ್ಲಿ ಮೊದಲು ಈ ಫ್ಯಾಶನ್ ಮೋಡಿಯನ್ನು ಪ್ರಚಾರಪಡಿಸಿದವರು ಫ್ರೆಂಚರು. ಅಲ್ಲಿಂದ ಬಹುಬೇಗ ಪ್ರಪಂಚದಾದ್ಯಂತ ಪ್ರವಾಸ ಮಾಡಿದ ಈ ವಿನ್ಯಾಸ, ಭಾರತವನ್ನು ತಲುಪಿ ಬಾಲಿವುಡ್ ಮಂದಿಯ ಅಚ್ಚುಮೆಚ್ಚಿನ ಆಯ್ಕೆಯಾಗಿತ್ತು. ಸರಿಸುಮಾರು ಒಂದು ದಶಕಗಳ ಕಾಲ ಟಾಪ್ ಸೆಲೆಬ್ರಿಟಿಗಳಿಂದ ಹಿಡಿದು, ಸಾಮಾನ್ಯ ವನಿತೆಯರವರೆಗೂ ಎಲ್ಲರ ನೆಚ್ಚಿನ ಕೇಶವಿನ್ಯಾಸವಾಗಿದ್ದ ಬಲೇಯಾಜ್ ಇದೀಗ